

ಡಾ. ಎಸ್. ರಾಮಮೂರ್ತಿ

# 12-7-2018ರಿಂದ 18-7-2018ರ ವರೆಗೆ



**ಮೇಷ**

ವಾರದ ಆರಂಭದಲ್ಲಿ ಮನಃಶಾಂತಿ. ಶ್ರಮವಿಲ್ಲದೆ ಕಾರ್ಯ ಸಾಧನೆ. ಮಿತ್ರರ ಭೇಟಿ. ಅನಾರೋಗ್ಯದ ಸಾಧ್ಯತೆ. ವೃತ್ತಿ, ವ್ಯವಹಾರದಲ್ಲಿ ಹಿನ್ನಡೆ. ವಿರೋಧಿಗಳಿಂದ ಉಪದ್ರವ. ಸೋದರ ವರ್ಗದವರ ಮೇಲೆ ಸಿಟ್ಟು ಪೆಟ್ಟಾಗುವ ಸಾಧ್ಯತೆ.

ಶುಭ ದಿನ: 13; ಶಿವ ಮತ್ತು  ಪಾರ್ವತಿ ಅಷ್ಟೋತ್ತರ ಪಠಿಸಿ



**ವೃಷಭ**

ವಾರದ ಮಧ್ಯ ಭಾಗದವರೆಗೂ ಅನುಕೂಲ. ಆಟ ಪಾಠಗಳಲ್ಲಿ ಮೇಲುಗೈ. ಉದ್ಯೋಗದಲ್ಲಿ ಮುನ್ನಡೆ. ಆಪ್ತರಿಂದ ಮಾರ್ಗದರ್ಶನ. ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ. ವಾರಾಂತ್ಯ ಬೇಸರ. ಆರೋಗ್ಯ ವ್ಯತ್ಯಯ. ವೃತ್ತಿಯಲ್ಲಿ ಹಿನ್ನಡೆ.

ಶುಭ ದಿನ: 15; ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ



**ಮಿಥುನ**

ಕೆಲಸ ಕಾರ್ಯಗಳು ಸಫಲ. ವ್ಯಾಪಾರದಲ್ಲಿ ನಿರೀಕ್ಷಿತ ಲಾಭ. ಕಲೆ ಕ್ರೀಡೆಗಳಲ್ಲಿ ಅಭಿವೃದ್ಧಿ. ಅಮೂಲ್ಯ ವಸ್ತುಗಳ ಖರೀದಿ ಚಿಂತನೆ ಕೈಗೂಡುವುವು. ತಕರಾರುಗಳಲ್ಲಿ ಜಯ ಲಭಿಸುವುದು. ಪತ್ರಾಗಮನದಿಂದ ಧೈರ್ಯ.

ಶುಭ ದಿನ: 16; ಲಕ್ಷ್ಮೀ ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ



**ಕಟಕ**

ವಾರದ ಆರಂಭದಲ್ಲಿ ಆತಂಕ. ವೃತ್ತಿ ವ್ಯವಹಾರಗಳನ್ನು ಮಾಡಲು ನಿರಾಸಕ್ತಿ. ಆರೋಗ್ಯ ವ್ಯತ್ಯಯ. ವಿರೋಧಿಗಳಿಂದ ತೊಂದರೆ ವಾರದ ಮಧ್ಯ ಭಾಗದಿಂದ ಧೈರ್ಯ. ಉದ್ಯೋಗದಲ್ಲಿ ಪ್ರಗತಿ. ಲೇವಾದೇವಿಗಳಲ್ಲಿ ಲಾಭ. ಪ್ರಯಾಣ ಸೌಖ್ಯ. ಆಪ್ತರಿಂದ ಸಲಹೆ.

ಶುಭ ದಿನ: 16;  ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಸಿಂಹ**

ವಾರದ ಆರಂಭದಲ್ಲಿ ಸಮಾಧಾನ. ಕೆಲಸ ಕಾರ್ಯಗಳಲ್ಲಿ ಯಶಸ್ಸು. ಹಿತಕರ ಸಂದೇಶ. ಲೇವಾದೇವಿಗಳಲ್ಲಿ ಲಾಭ. ಆತ್ಮೀಯಯರ ಭೇಟಿ. ವಾರದ ಮಧ್ಯ ಭಾಗದಲ್ಲಿ ಅಶಾಂತಿ. ಪೆಟ್ಟಾಗುವ ಸಂಭವ. ವೃತ್ತಿ ಪ್ರವೃತ್ತಿಗಳಲ್ಲಿ ಸಮಸ್ಯೆ.

ಶುಭ ದಿನ: 13; ದುರ್ಗಾ ಮತ್ತು ಗುರು ಅಷ್ಟೋತ್ತರ ಪಠಿಸಿ



**ಕನ್ಯಾ**

ಕುಟುಂಬ ಸದಸ್ಯರಲ್ಲಿ ಒಮ್ಮತ. ಉದ್ಯೋಗ ವೃತ್ತಿಗಳಲ್ಲಿ ಪ್ರಗತಿ. ಆತ್ಮೀಯರಿಂದ ಸಹಾಯ. ಕ್ರಯ ವಿಕ್ರಯಗಳಲ್ಲಿ ನಿರೀಕ್ಷಿತ ಲಾಭ ಧೈವೀಕ ಕಾರ್ಯಗಳಲ್ಲಿ ಆಸಕ್ತಿ. ವಾರಾಂತ್ಯ ಚಂಚಲ ಮನಸ್ಸು. ಕಾರ್ಯ ಕಲಾಪಗಳಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ಭಯ.

ಶುಭ ದಿನ: 15; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ತುಲಾ**

ಕೆಲಸ ಕಾರ್ಯಗಳು ಸರಾಗವಾಗಿ ನಡೆದು ಮನಃಶಾಂತಿ ಲಭಿಸುವುದು. ವ್ಯಾಪಾರ ವ್ಯವಹಾರಗಳಲ್ಲಿ ಸೂಕ್ತ ಲಾಭ. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ಕಲೆ, ಕ್ರೀಡೆಗಳಲ್ಲಿ ಅಭಿವೃದ್ಧಿಯಾಗುವುದು.

ಶುಭ ದಿನ: 16; ಗಣೇಶ ಮತ್ತು  ಶಿವ ಅಷ್ಟೋತ್ತರ ಪಠಿಸಿ



**ವೃಶ್ಚಿಕ**

ವಾರದ ಆರಂಭದಲ್ಲಿ ಒತ್ತಡ. ಹಣದ ಮುಗ್ಗಟ್ಟು. ಪತಿ ಪತ್ನಿಯರಲ್ಲಿ ಮನಃಸ್ತಾಪ. ಉದ್ಯೋಗದಲ್ಲಿ ಸಮಸ್ಯೆ. ವಾರದ ಮಧ್ಯ ಭಾಗದಿಂದ ಚೇತರಿಕೆ. ಕೆಲಸ ಕಾರ್ಯಗಳಲ್ಲಿ ಮುನ್ನಡೆ. ಆಪ್ತರಿಂದ ಸಹಾಯ. ವ್ಯಾಪಾರದಲ್ಲಿ ನಿರೀಕ್ಷಿತ ಲಾಭ.

ಶುಭ ದಿನ: 16;  ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ



**ಧನಸ್ಸು**

ವಾರದ ಆರಂಭದಲ್ಲಿ ಮನಃಶಾಂತಿ. ನಿರೀಕ್ಷೆಯಂತೆ ಕಾರ್ಯಸಫಲತೆ. ವ್ಯಾಪಾರದಲ್ಲಿ ಲಾಭ. ಶತ್ರುಭೀತಿ ದೂರವಾಗುವುದು. ವಾರದ ಮಧ್ಯ ಭಾಗದಲ್ಲಿ ಅಶಾಂತಿ. ಅಕಾಲ ಭೋಜನ. ಅನಾರೋಗ್ಯ. ಉದ್ಯೋಗ ವೃತ್ತಿಗಳಲ್ಲಿ ಸಮಸ್ಯೆ.

ಶುಭ ದಿನ: 13; ವಿಷ್ಣು ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ



**ಮಕರ**

ವಾರದ ಮಧ್ಯಭಾಗದವರೆಗೂ ಅನುಕೂಲ. ಶ್ರಮವಿಲ್ಲದೆ ಕಾರ್ಯಸಿದ್ಧಿ. ವ್ಯಾಪಾರದಲ್ಲಿ ಲಾಭ. ಆತ್ಮೀಯರೊಂದಿಗೆ ಚರ್ಚೆ. ಪ್ರಯಾಣ ಸೌಖ್ಯ. ಹಿರಿಯರಿಂದ ಮಾರ್ಗದರ್ಶನ. ಸಂಘ ಸಂಸ್ಥೆಗಳಿಂದ ಸಹಾಯ. ದೀರ್ಘಕಾಲದ ಮಿತ್ರರ ಭೇಟಿ.

ಶುಭ ದಿನ: 15;  ಗಣೇಶ ಮತ್ತು ಶಿವ ಅಷ್ಟೋತ್ತರ ಪಠಿಸಿ



**ಕುಂಭ**

ಮನಸ್ಸು ಹಗುರವಾಗುವುದು. ವಿರೋಧಿಗಳು ಹಿಂದೆ ಸರಿಯುವರು. ಕೆಲಸ ಕಾರ್ಯಗಳಲ್ಲಿ ಯಶಸ್ಸು. ವ್ಯಾಪಾರದಲ್ಲಿ ನಿರೀಕ್ಷಿತ ಲಾಭ. ತಕರಾರುಗಳಲ್ಲಿ ನ್ಯಾಯಪ್ರಾಪ್ತಿ. ಮಕ್ಕಳು ಸಹಾಯ ಮಾಡುವರು. ಭೂಮಿ ವ್ಯವಹಾರಗಳಲ್ಲಿ ಪ್ರಗತಿ.

ಶುಭ ದಿನ: 16; ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಮೀನ**

ವಾರದ ಆರಂಭದಲ್ಲಿ ಏನಾದರೊಂದು ಸಮಸ್ಯೆ. ಹಣದ ವಿಚಾರದಲ್ಲಿ ಒತ್ತಡ.  ಧೈರ್ಯ ಪ್ರಾಪ್ತಿ, ಆತ್ಮ ವಿಶ್ವಾಸದಿಂದ ಕೆಲಸ ಕಾರ್ಯಗಳನ್ನು ಮಾಡುವಿಕೆ ಹಾಗೂ ಸಫಲತೆ. ಲೇವಾದೇವಿಗಳಲ್ಲಿ ಲಾಭ. ಗುರುಹಿರಿಯರ ಭೇಟಿಯಿಂದ ಸಂತಸ.

ಶುಭ ದಿನ: 16; ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ


